೮ ರಣಜೀತಪುರ
೯ ದೇವಗಿರಿ
೧೦ ಕಾರ್ತಿಕೇಶ್ವರ
೧೧ ಹುಲಿಕುಂಟೆ
೧೨ ಶಂಕರಪುರ
೧೩ ಸುಶೀಲನಗರ
೧೪ ಸಿದ್ದಾಪುರ.

ಆ) ಈ ಗ್ರಾಮಗಳ ಎಲ್ಲಾ ಜಮೀನುಗಳ ಸರ್ವೆ ಕೆಲಸಗಳು ಮುಗಿದಿದ್ದು ಅವುಗಳ ಸೆಟ್ಲ್‌ಮೆಂಟ್ ಮಾತ್ರ ಆಗಬೇಕಾಗಿದೆ. ಈ ಹಳ್ಳಿಗಳು ಈಗಾಗಲೇ ಮದ್ರಾಸ್ (ಅಬಾಲಿಷನ್ ಅಂಡ್ ಕನ್ವರ್ಷನ್ ಇನ್ ಟು ರೈತವಾರಿ) ಮತ್ತು ಕರ್ನಾಟಕ ಸಂಡೂರು ಇನಾಂ ರದ್ದತಿ ಕಾಯಿದೆ, ೧೯೭೨ರ ಪರಿವಿಧಿಯೊಳಗೆ ಬರುವೆ. ಈ ಕಾಯ್ದೆಗಳ ಪ್ರಕಾರ ಈ ಇನಾಂ ಜಮೀನುಗಳು ಸರ್ಕಾರದಲ್ಲಿ ನಿಹಿತಗೊಳಿಸುವ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಇನಾಂ ರದ್ದಿಯಾಗುತ್ತದೆ. ಕಾನೂನು ಇಲಾಖೆಯೊಂದಿಗೆ ಸಮಾಲೋಚಿಸಿ ಅಧಿಸೂಚನೆಯನ್ನು ಹೊರಡಿಸಲು ತೀವ್ರ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಮೇಲ್ಕಂಡ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) —,,—

ರೈತರುಗಳಿಗೆ ಮುಂದ್ರಾಂಕ ಶುಲ್ಕದ ವಿನಾಯಿತಿ

೫೬೬. ಶ್ರೀ ಸಿ ಎಂ. ಉದಾಸಿ (ಹಾನಗಲ್ಲ). —ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೈತರು ೧೦,೦೦೦ ರೂ.ಗಳವರೆಗೆ ಸಾಲ ಪಡೆಯಲಿಲಂ ಋಣಭಾರ ಪತ್ರಕ್ಕೆ ನೋಂದಾಯಿಸುವಾಗ, ಕೇವಲ ಚಿಕ್ಕ ಮತ್ತು ಅತಿ ಚಿಕ್ಕ ರೈತರಿಗೆ ಮಾತ್ರ ಸ್ಟ್ಯಾಂಪ್ ಶುಲ್ಕ ವಿನಾಯಿತಿ ಇದ್ದು, ಈ ಬಗ್ಗೆ ನೋಂದಣಿ ಮಹಾಧಿಕಾರಿಗಳಿಂದ ಸ್ಪಷ್ಟೀಕರಣ ಬಂದಿರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು). —

ಅ) ಮತ್ತು ಆ) ಸರ್ಕಾರವು ೧-೧-೧೯೮೭ರಿಂದ ಸಣ್ಣ ಮತ್ತು ಅತಿಸಣ್ಣ ರೈತರುಗಳಿಗೆ ಮಾತ್ರ ಋಣಭಾರ ಪತ್ರಗಳನ್ನು ನೋಂದಾಯಿಸುವಾಗ ಕಟ್ಟಬೇಕಾದ ಮುಂದ್ರಾಂಕ ಶುಲ್ಕವನ್ನು ತೆರವು ಮಾಡಿರುತ್ತದೆ, ಮುದ್ರಾಂಕ ಶುಲ್ಕವನ್ನು ಇತರೆ ವರ್ಗದ ರೈತರಿಗೆ ವಿಸ್ತರಿಸಲು ಅರ್ಜಿಗಳು ಸರ್ಕಾರಕ್ಕೆ ಬಂದಿದ್ದು ಅವುಗಳು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಬರಗಾಲ ಪ್ರದೇಶದಲ್ಲಿ ರೈತರ ಸಾಲ ಮುಂದೂಡುವ ಕುರಿತಂ

೫೬೭. ಶ್ರೀ ಸಿ. ಎಂ. ಉದಾಸಿ (ಹಾನಗಲ್ಲ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸತತವಾಗಿ ಮೂರು ವರ್ಷ ಬರಗಾಲ ಇರುವ ಪ್ರದೇಶದಲ್ಲಿ ರೈತರಿಗೆ ಅವರು ಮಾಡಿದ ಸಾಲವನ್ನು ನಬಾರ್ಡ್‌ರವರು ಮುಂದೂಡಲು ಘೋಷಿಸಿದ್ದು, ಇದು ಕಾರ್ಯರೂಪಕ್ಕೆ ಬರುವುದೇ ?